ಇನ್ನೂ ಆಶ್ಚರ್ಯದಿಂದಲೇ ನೋಡ್ತಿದ್ದ ಮೂರನೇ ತಂಗಿಗೆ ಗದ್ಗದ ದನಿಯಲ್ಲಿ ಶಾಂತಿ ಹೇಳಿದಳು—

"ಅಣ್ಣನೇ ಶಿವ..."

ಶಿವರಾವು ತಲೆತಗ್ಗಿಸಿದ. ತಂಗಿಯನ್ನು ಮಾತಾಡಿಸುವಂತೆ ನೋಡೋಕೂ ನಾಚಿಕೆಯೆನಿಸಿತು.

"ಹೌದು ಇಷ್ಟು ದಿವ್ಸ ಎಲ್ಲಿದ್ದ್ಯಪ" ಕೇಳಿದಳು ದೊಡ್ಡ ತಂಗಿ ನಿಷ್ಠುರವಾಗಿ.

"ನಿಮಗ್ಯಾರಿಗೂ ಇನ್ನೂ ಮದಿವೆಗಳಾಗ್ಲಿಲ್ಲಾ?" ಅಂತ ಕೇಳಬೇಕೆಂದುಕೊಂಡವನು ಬಿಟ್ಟುಬಿಟ್ಟ ಶಿವರಾವು. ಅಷ್ಟರೊಳಗೆ ಈ ಪ್ರಶ್ನೆ ಹಾಕಿದಳು ದೊಡ್ಡ ತಂಗಿ. ಸಣ್ಣಗೆ ಕೆಮ್ಮಿ ಸುಮ್ಮನಾದ. ಉತ್ತರ ಕೊಡಲಿಲ್ಲ.

ಹೊರಗೆ ಮಳೆ ಸುರಿತಲೇ ಇತ್ತು.

ಕೊನೆಗೆ ಶಾಂತಿ ನಿಟ್ಟುಸಿರು ಬಿಡುತ್ತ ಎದ್ದಳು.

"ಅಡಿಗೆ ಮಾಡ್ತೀನಿ."

